ಕಡೂರು ಡಿಸ್ಟ್ರಿಕ್ಟು.

ಅಬಸ್ಟ್ರಕ್ಟ್ ಇನ್ಸ್ತಿಹಾರ್.

ತಾರೀಖು 15ನೆ ಫೆಬ್ರುವರಿ 1907.

ಯಡೆಹಳ್ಳಿ ಸಬ್ ತಾಲ್ಲೂಕಿನಲ್ಲಿ ಜವಿನಾನುದಾರರಾಗಿದ್ದ Mr. T. W. ಡಾರ್ಲಿಂಗ್ ಸಾಹೇಬರು ಮತ್ತು Mrs. J. D. ಡಾರ್ಲಿಂಗ್ ಬೀಬಿ ಸಾಹೇಬರವರಿಂದ ನೇರ್ಪಡೆಕೊಪ್ಪ ಮತ್ತು ಬಡಗಬೈಲು ಗ್ರಾಮಗಳಿಗೆ ಬರಬೇಕಾದ ಕಂಬಾಯು ಬಾಕೀಗಾಗಿ ಇವರಿಗೆ ಸೇರಿದ ಸ್ಥಿರಸ್ವತ್ತನ್ನು ಕಡೂರು ಡಿಸ್ಟ್ರಿಕ್ಟು ಯಡೆಹಳ್ಳಿ ಸಬ್ ತಾಲ್ಲೂಕು ಕಛೇರಿ ರೂಬರೂಬು ಡೆಪ್ಯುಟಿ ಅಮಲ್ದಾರ್ರಿಂದ 29—4—1907ರಲ್ಲಿ ಹರಾಜು ಮಾಡಲ್ಪಡುತ್ತೆಂತ ಇದರಿಂದ ಪ್ರಸಿದ್ಧಪಡಿಸಿಕೆ.

ಹೆಚ್ಚಿನ ತಪಸೀಲುಗಳಿಗೆ 1907ನೆ ಇಸವಿ ಫೆಬ್ರುವರಿ 28ನೆ ಮಂಗಳವಾರ ಮೈಸೂರು ಗೆಜೆಟ್ಟಿನ 2ನೆ ಭಾಗದ 63—64ನೆ ಪೇಜುಗಳನ್ನು ನೋಡಬೇಕು.

ಎಂ. ಲಕ್ಷ್ಮಣಪ್ಪ,
ಛಾರ್ಜ್ ಡೆಪ್ಯುಟಿ ಕಮಿಷನರ್.

ಕೋಲಾರ ಡಿವಿಜ್.

ಇನ್ಸ್ತಿಹಾರ್ನಾಮೆ.

ಕೋಲಾರ, ತಾರೀಖು 27ನೆ ಫೆಬ್ರುವರಿ 1907.

ಬೆಂಗಳೂರು ಡಿಸ್ಟ್ರಿಕ್ಟು ಕೋಲಾರ ಸಬ್ ಡಿವಿಜ್ ಸಾಹೇಬರವರ ಆಫೀಸಿನಿಂದ—ಇಲ್ಲಿರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಈ ಸಬ್ ಡಿವಿಜ್ ಮುಜಕೂರು ಬಾಬತು ಜೋಡಿ, ಕಾಯಂಗುತ್ತ ಇನಾಂ ಸರ್ವಮಾನ್ಯ ವಗ್ಗೈರ ಗ್ರಾಮಗಳ ಬಾಬತು ಆಯಾಯ ಇನಾಂದಾರರಿಗೆ ಸಲ್ಲತಕ್ಕ ಟಾಡಿ ಹುಟ್ಟುವಳಿ ಹಕೀಮತ್ತನ್ನ ಕೆಳಗೆ ನಮೂದಿಸಿರುವ ತಾರೀಖುಗಳಲ್ಲಿ ವಿಚಾರಣೆ ಮಾಡಲ್ಪಡುತ್ತೆ. ಆಯಾಯ ಗ್ರಾಮಗಳಿಗೆ ಸಂಬಂಧಪಟ್ಟ ಇನಾಂದಾರರುಗಳು ಸಾಕ್ಷ್ಯ ಮತ್ತು ಹನ್ನಲ್ಲಿರತಕ್ಕ ದಾಖಲಾತಿಗಳೊಡನೆ ಕೋಲಾರ ಮೊಕ್ಕಾಂಗೆ ಬೆವಿ 11 ಘಂಟೆಗೆ ಹಾಜರಾಗತಕ್ಕದ್ದು. ಹಾಗೆ ಹಾಜರಾಗದೆ ತಪ್ಪಿದಲ್ಲಿ ರೂಲ್ಸುವೇರೆ ಕ್ರಮ ಜರಗಿಸಲ್ಪಡುತ್ತೆ. ನಂತರ ಬರುವ ಯಾವ ತಕರಾರನ್ನು ಅಂಗೀಕರಿಸಲು ಆಗಲಾರದು ತಿಳಿಯುವದು:—

ತಾಲ್ಲೂಕು.	ಗ್ರಾಮ.	ಹಿಯರಿಂಗ್ ತಾರೀಖು.	ಇನಾಂದಾರ್ರ ಹೆಸರು.
ಕಾನಕಾನಹಳ್ಳಿ ...	ಜೋಡಿ ಬಾಚಹಳ್ಳಿ ...	1907ನೆ ಏಪ್ರಿಲ್ 1 ...	ಬಿಂದುಮಾಧವಾಚಾರ್ರು ಮತ್ತು ಲಕ್ಷ್ಮಣಾಚಾರ್ರು.
ಡಿಟೋ ...	ಮರಳೆಬೀಕುಪ್ಪ ...	ಡಿಟೋ ...	ಗುರುಬಸವಯ್ಯ, ಸಿದ್ದಲಿಂಗಪ್ಪ ವಿಜಂಟು
ಡಿಟೋ ...	ಕಾಯಂಗುತ್ತಾ ನೆಲಗುಳಿ ...	ಡಿಟೋ ...	ಗೌಡವೀರಭದ್ರಪ್ಪ.
ಕೋಲಾರ ...	ತಾಳವಾಡಿ ...	1907ನೆ ಏಪ್ರಿಲ್ 2 ...	ಮೈ॥ ಬಿ. ಚನ್ನರಾಜೆ ಅರಸ್.
ಡಿಟೋ ...	ಕೊಡಿಮಾಲಕರೇನಹಳ್ಳಿ ...	ಡಿಟೋ ...	ವೆಂಕಟಸುಬ್ಬಯ್ಯ ಮತ್ತು ಇತರರು ಮತ್ತು ವ್ಯಾಸರಾಯ ವಠೆವ ವಿಜಂಟು.
ಡಿಟೋ ...	ಉರಗಹಳ್ಳಿ ...	ಡಿಟೋ ...	ಮೈ॥ ಎ. ನರಸಿಂಹೈಯ್ಯಂಗಾರ್, ಬಿಟ್ಟಿರ್ಡ್ ಸಬ್ ಡಿವಿಜ್ ಆಫಿಸರ್.
ಚನ್ನಪಟ್ಟಣ ...	ಜೋಡಿ ಡವಾಣಗುಂಡು ...	1907ನೆ ಏಪ್ರಿಲ್ 3 ...	,, ಕೆ. ವಿ. ಕೋದಂಡರಾಮ ಅಯ್ಯರ್.
ಮಾಗಡಿ ...	ಜೋಡಿ ಹುಲುವೇನಹಳ್ಳಿ ...	ಡಿಟೋ ...	ಚಂದ್ರಶೇಖರಶಾಸ್ತ್ರಿ.
ಡಿಟೋ ...	ಕುರುಬರಹಳ್ಳಿ ...	ಡಿಟೋ ...	ಮೈ॥ ವೇದಾಂತ ಐಯ್ಯಂಗಾರ್.
ಡಿಟೋ ...	ಜೋಡಿ ದಂಡೇನಹಳ್ಳಿ ...	1907ನೆ ಏಪ್ರಿಲ್ 4 ...	,, ಕರಣೀಕ ಕೃಷ್ಣಮೂರ್ತಿರಾವ್.
ಡಿಟೋ ...	ಬಸವಾಪಟ್ಟಣ ...	ಡಿಟೋ ...	ರಾಮಸ್ವಾಮಿಶಾಸ್ತ್ರಿ, ಸುಬ್ಬಮ್ಮ ಮತ್ತು ಇತರರು.

ಸಿ. ದೇವರಾಜ ಅರಸ್,
ಸಬ್ ಡಿವಿಜ್ ಆಫಿಸರ್.